ಉ. ಬೆಳ್ತಂಗಡಿ ತಾಲ್ಲೂಕಿನ ಸುಲ್ಕೇರಿ - ನೆಲ್ಲಿತಕ್ಕ ಗ್ರಾಮದ ಬಳಿ ಇರುವ ಮಾಡಿಕೆತೋಡು ತೋಡಿಗೆ ಕಿರು ಸೇತುವೆ ನಿರ್ಮಾಣ ಮಾಡುವ ಬಗ್ಗೆ.

ಊ. ಬೆಳ್ತಂಗಡಿ ತಾಲ್ಲೂಕಿನ ನಾವೂರು ಗ್ರಾಮದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ

ಹಾಗೂ

ಋ. ಮೂಲಭಂತಿ ಗ್ರಾಮದ ಅಡ್ಕ-ಅನಡ್ಕ ರಸ್ತೆಯ ಬೈಕಳ ಎಂಬಲ್ಲಿ "ನಂದಿಕಾಡು" ತೊಳೆಗೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಛೇರ್ಮನ್ : ಅರ್ಜಿಗಳನ್ನು ಒಪ್ಪಿಸಲಾಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ,

ಅ. ದಕ್ಷಿಣ ಕನ್ನಡ ಸಹಕಾರಿ ಮೀನು ಮಾರಾಟ ಫೆಡರೇಷನ್ ಮೂಲಕ ಗಿಲ್ನೆಟ್ ಮೀನುಗಾರಿಕೆಗೆ ನೀಡಿದ ಸಾಲವನ್ನು ಮನ್ನಾ ಮಾಡುವ ಬಗ್ಗೆ.

ಹಾಗೂ

ಆ. ಕರ್ನಾಟಕ ರಾಜ್ಯದಲ್ಲಿ ಹೊಲಿಗೆ ಕೆಲಸಗಾರರ ಕ್ಷೇಮ ನಿಧಿ ಬೋರ್ಡನ್ನು ಸ್ಥಾಪಿಸಿ ಸವಲತ್ತುಗಳನ್ನು ಒದಗಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಛೇರ್ಮನ್ : ಅರ್ಜಿಯನ್ನು ಒಪ್ಪಿಸಲಾಯಿತು.

9. ಗಮನ ಸೆಳೆಯುವ ಸೂಚನೆ:

(ಅ) ಸಕ್ಕರೆ ನಿರ್ದೇಶನಾಲಯವನ್ನು ಬೆಂಗಳೂರಿನಿಂದ ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಆಗಿರುವ ತೊಂದರೆ ಬಗ್ಗೆ.

ಶ್ರೀಯುತವಾದ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮತ್ತು ಎಂ.ಎಸ್. ಆತ್ಮಾನಂದ (ಮಂಡ್ಯ) : ಛೇರ್ಮನ್‌ರವರೆ, ಬೆಂಗಳೂರಿನಲ್ಲಿರುವ ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಉಂಟಾಗುವ ತೊಂದರೆಗಳ ಬಗ್ಗೆ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರ ಗಮನಸೆಳೆಯುತ್ತೇವೆ.

+ ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು) : ಮಾನ್ಯ ಛೇರ್ಮನ್‌ರವರೆ, ಸಕ್ಕರೆ ನಿರ್ದೇಶನಾಲಯವನ್ನು 1973 ರಲ್ಲಿ ಪ್ರಾರಂಭಿಸಲಾಗಿ, ಈ ನಿರ್ದೇಶನಾಲಯಕ್ಕೆ ಬೆಂಗಳೂರಿನಲ್ಲಿ ಮಾತ್ರ ಕೇಂದ್ರ ಕಛೇರಿ ಇರುತ್ತದೆ. ಬೇರೆ ಇಲಾಖೆಯಂತೆ ವಿಭಾಗ ಮಟ್ಟದ, ಜಿಲ್ಲಾ ಮಟ್ಟದ, ಉಪ ವಿಭಾಗ ಮತ್ತು ತಾಲ್ಲೂಕು ಮಟ್ಟದ ಯಾವುದೇ ಅಧೀನ ಕಛೇರಿಗಳು ಇರುವುದಿಲ್ಲ ಸಕ್ಕರೆ ನಿರ್ದೇಶನಾಲಯವನ್ನು ಪ್ರಾರಂಭಿಸಿದಾಗ ರಾಜ್ಯದಲ್ಲಿ ಕೇವಲ 12 ಸಕ್ಕರೆ ಕಾರ್ಖಾನೆಗಳು ಇದ್ದು ಈಗ ರಾಜ್ಯದಲ್ಲಿ 35 ಸಕ್ಕರೆ ಕಾರ್ಖಾನೆಗಳು ಇರುತ್ತವೆ. ಅವುಗಳಲ್ಲಿ 18 ಸಹಕಾರಿ ವಲಯದಲ್ಲಿ, 2 ಸಾರ್ವಜನಿಕ ವಲಯದಲ್ಲಿ, 1 ಜಂಟಿ ವಲಯದಲ್ಲಿ ಹಾಗೂ 14 ಖಾಸಗಿ ವಲಯದಲ್ಲಿರುತ್ತವೆ. ಇವುಗಳ ದಿನನಿತ್ಯ ಕಬ್ಬು ಸುರಿಸುವ ಪ್ರಮಾಣ